0202/0621

**II Semester of Three Year LL.B./VI Semester of B.A. LL.B./B.B.A. LL.B.**
**Examination, December 2012**
**COMPANY LAW (Course – II)**

Duration : 3 Hours　　　　　　　　　　　　　　　　　Max. Marks : 100

**Instructions** : 1. Answer all **5** questions.

2. **One** essay type questions and **one** short note question or problem from **each** Unit which is referred as Part (**a**) and Part (**b**) in all the Units.

3. Figures to the **right** indicate **marks**.

4. Answer should be written **either** in **English** or **Kannada** **completely**.

## UNIT – I

Q. No. 1. (a) Explain the doctrine of "Lifting the corporate veil". Marks : 15

''ಸಂಸ್ಥಾ ಸ್ವರೂಪದ ಮುಸುಕಿನ ಎತ್ತುವಿಕೆ'' ಸಿದ್ಧಾಂತವನ್ನು ವಿವರಿಸಿರಿ.

OR/**ಅಥವಾ**

State the formalities to be completed for the formation of a company. Discuss the effects of issue of certificate of incorporation.

ಒಂದು ಕಂಪನಿಯನ್ನು ರಚಿಸಬೇಕಾದರೆ ಪೂರೈಸಬೇಕಾದ ಔಪಚಾರಿಕತೆಗಳನ್ನು ಹೇಳಿರಿ. ಕಂಪನಿಯ ಸಂಯೋಜನಾ ಪ್ರಮಾಣ ಪತ್ರವನ್ನು ಕೊಡುವುದರಿಂದ ಆಗುವ ಪರಿಣಾಮಗಳನ್ನು ಚರ್ಚಿಸಿರಿ.

(b) Write a brief note on "Name clause". Marks : 5

''ಹೆಸರಿನ ಖಂಡ''ದ ಮೇಲೆ ಒಂದು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

OR/**ಅಥವಾ**

'X' Company by passing special resolution in its general meeting makes alteration in its objects. However company did not obtain the permission from the company law board for the alteration. Is this alteration valid ?

'X' ಕಂಪನಿಯು ತನ್ನ ಸಾಮಾನ್ಯ ಸಭೆಯಲ್ಲಿ ಒಂದು ವಿಶೇಷ ಗೊತ್ತುವಳಿಯನ್ನು ಅಂಗೀಕರಿಸಿ ತನ್ನ ಉದ್ದೇಶಗಳನ್ನು ಬದಲಾವಣೆ ಮಾಡುತ್ತದೆ. ಆದಾಗ್ಯೂ ಕಂಪನಿಯು ಈ ಬದಲಾವಣೆಗೆ ಕಂಪನಿ ಕಾನೂನು ಮಂಡಳಿಯ ಅನುಮತಿಯನ್ನು ಪಡೆದಿರಲಿಲ್ಲ. ಈ ಬದಲಾವಣೆ ಊರ್ಜಿತವೇ ?

**P.T.O.**

## UNIT – II

Q. No. 2. (a) Define prospectus. State its contents. Marks : 15

ಪರಿಚಯ ಪತ್ರಿಕೆಯನ್ನು ವ್ಯಾಖ್ಯಾನಿಸಿರಿ. ಅದರ ಒಳಾಂಶಗಳನ್ನು ಹೇಳಿರಿ.

OR/ಅಥವಾ

Make a note on Annual General Meeting and its importance.

ವಾರ್ಷಿಕ ಮಹಾಸಭೆ ಮತ್ತು ಅದರ ಪ್ರಾಮುಖ್ಯತೆ ಬಗ್ಗೆ ಒಂದು ಟಿಪ್ಪಣಿ ಮಾಡಿರಿ.

(b) Directors of a company executed a bond in favour of 'A'. The Directors had the powers in the articles to issue bonds provided they were authorised by a proper resolution of the company. In fact, no such resolution was passed. Whether the bond executed in favour of 'A' is legally valid ? Marks : 5

ಒಂದು ಕಂಪನಿಯ ನಿರ್ದೇಶಕರು 'A' ನಿಗೆ ಒಂದು ಮುಚ್ಚಳಿಕೆ ಬರೆದು ಕೊಡುತ್ತಾರೆ. ಕಂಪನಿಯ ಲಿಖಿತ ಕಟ್ಟಳೆಗಳ ಮೇರೆಗೆ ಕಂಪನಿಯು ಕ್ರಮಬದ್ಧವಾಗಿ ಗೊತ್ತುವಳಿ ಅಂಗೀಕರಿಸಿ ನಿರ್ದೇಶಕರಿಗೆ ಅಧಿಕಾರ ನೀಡಿದಾಗ ಮಾತ್ರ ಅವರು ಈ ರೀತಿಯ ಮುಚ್ಚಳಿಕೆ ಕೊಡಬಹುದಾಗಿತ್ತು. ನಿಜವಾಗಿ ಇಂತಹ ಯಾವ ಗೊತ್ತುವಳಿ ಅಂಗೀಕರಿಸಿರಲಿಲ್ಲ. 'A'ನಿಗೆ ಕಂಪನಿ ನೀಡಿದ ಮುಚ್ಚಳಿಕೆ ಕಾನೂನು ಸಮ್ಮತವೇ ?

OR/ಅಥವಾ

'R' applied for shares in a company on the basis of a prospectus containing the names of several persons as Directors. But before allotment took place there were changes in the directorate some directors having retired. Can 'R' avoid the allotment ?

ಒಂದು ಕಂಪನಿಯ ಪರಿಚಯ ಪತ್ರದಲ್ಲಿ ಹಲವು ಜನರ ಹೆಸರನ್ನು ನಿರ್ದೇಶಕರೆಂದು ಕಾಣಿಸಿದ್ದರಿಂದ 'R' ಎಂಬಾತನು ಆ ಕಂಪನಿಯ ಶೇರುಗಳನ್ನು ಕೊಳ್ಳಲು ಅರ್ಜಿ ಹಾಕುತ್ತಾನೆ. ಶೇರುಗಳು ಹಂಚಿಕೆಯಾಗುವ ಮೊದಲೇ ಕೆಲವರು ನಿವೃತ್ತರಾದ ಮೂಲಕ ನಿರ್ದೇಶಕ ಮಂಡಳಿಯಲ್ಲಿ ಕೆಲವು ಬದಲಾವಣೆಗಳಾದವು. 'R'ನು ಶೇರುಗಳು ತನಗೆ ಹಂಚಿಕೆಯಾಗುವುದರಿಂದ ತಪ್ಪಿಸಿಕೊಳ್ಳಲು ಬರುತ್ತದೆಯೇ ?

## UNIT – III

Q. No. 3. (a) Discuss the provisions of the Companies Act 1956 for the prevention of oppression and mismanagement. Marks : 15

ದಬ್ಬಾಳಿಕೆ ಮತ್ತು ದುರಾಡಳಿತ ತಡೆಗಟ್ಟಲು ಕಂಪನಿ ಅಧಿನಿಯಮ 1956 ಅಡಿಯಲ್ಲಿಯ ಉಪಬಂಧಗಳನ್ನು ಚರ್ಚಿಸಿರಿ.

OR/ಅಥವಾ

Who can apply for Winding Up ? Explain the consequences of courts winding up order.

ಕಂಪನಿ ಸಮಾಪನೆಗೆ ಯಾರು ಅರ್ಜಿ ಸಲ್ಲಿಸಬಹುದು ? ಕಂಪನಿ ಸಮಾಪನೆ ನ್ಯಾಯಾಲಯದ ಆದೇಶದ ಪರಿಣಾಮಗಳನ್ನು ವಿವರಿಸಿರಿ.

(b) 'A' and 'B' were only share holders as well as directors of a Private Company. Some serious differences developed between them and they became hostile with each other. 'A' seeks legal advise from you. Advise 'A'. Marks : 5

'A' ಮತ್ತು 'B' ಇವರಿಬ್ಬರೇ ಒಂದು ಖಾಸಗಿ ಕಂಪನಿಯ ಶೇರುದಾರರು ಮತ್ತು ನಿರ್ದೇಶಕರಾಗಿದ್ದರು. ತರುವಾಯ ಅವರಿಬ್ಬರೊಳಗೆ ಭಿನ್ನಾಭಿಪ್ರಾಯಗಳು ಬಂದು ಹಗೆತನ ಬೆಳೆಯಿತು. 'A'ನು ನಿಮ್ಮಿಂದ ಕಾನೂನು ಸಲಹೆ ಕೇಳುತ್ತಾನೆ. 'A'ಗೆ ಸಲಹೆ ನೀಡಿ.

OR/**ಅಥವಾ**

'X' applied for some shares in 'Y' Company. His application was sent by post. A letter of allotment was despatched by the company soon after. But the letter never reached to 'X'. Decide the liability of 'Y'.

'X' ನು 'Y' ಕಂಪನಿಯಲ್ಲಿ ಶೇರುಗಳಿಗಾಗಿ ಅರ್ಜಿಯನ್ನು ಹಾಕಿದ್ದಾನೆ. ಅವನು ಅರ್ಜಿಯನ್ನು ಅಂಚೆ ಮೂಲಕ ಕಳುಹಿಸಿದ್ದಾನೆ. ಕಂಪನಿಯು ಬೇಗನೆ ಶೇರುಗಳ ಹಂಚಿಕೆ ಪತ್ರವನ್ನು ಅವನಿಗೆ ಕಳುಹಿಸಿಕೊಟ್ಟಿತು. ಆದರೆ ಆ ಪತ್ರವು 'X'ಗೆ ತಲುಪಲೇ ಇಲ್ಲ. 'Y'ನ ಬಾಧ್ಯತೆಯನ್ನು ತೀರ್ಮಾನಿಸಿರಿ.

## UNIT – IV

Q. No. 4. (a) Explain the procedure, powers and functions of the Securities Appellate Tribunal under SEBI Act 1992. Marks : 15

ಸೆಬಿ ಅಧಿನಿಯಮ 1992ರ ಅಡಿಯಲ್ಲಿ ಶೇರು ಮೇಲ್ಮನವಿ ನ್ಯಾಯಾಧಿಕರಣದಲ್ಲಿಯ ಪ್ರಕ್ರಿಯೆ, ಅಧಿಕಾರಗಳು ಮತ್ತು ಕಾರ್ಯಗಳನ್ನು ವಿವರಿಸಿರಿ.

OR/**ಅಥವಾ**

Discuss when and how the Central Government can suspend business of a Stock Exchange under the Securities Contracts (Regulation) Act.

ಭದ್ರತಾ ಪತ್ರಗಳ ಕರಾರು (ನಿಯಂತ್ರಣ) ಅಧಿನಿಯಮದಡಿಯಲ್ಲಿ ಹೇಗೆ ಮತ್ತು ಯಾವ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರವು ಸ್ಟಾಕ್ ವಿನಿಮಯ ವ್ಯಾಪಾರ ರದ್ದು ಮಾಡುವುದರ ಬಗ್ಗೆ ಚರ್ಚಿಸಿ.

(b) Write a note on Management of SEBI. Marks : 5

ಸೆಬಿಯ ನಿರ್ವಹಣೆ (ವ್ಯವಸ್ಥಾಪನೆ) ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

OR/**ಅಥವಾ**

Listing of Securities.

ಸೆಕ್ಯುರಿಟೀಸ್ ಪಟ್ಟಿ ಮಾಡುವುದು.

## UNIT – V

Q. No. 5. (a) Explain the provisions relating to various Penalties and enforcement of the orders of Adjudicating authority under the FEMA Act 1999. Marks : 15

ವಿದೇಶಿ ವಿನಿಮಯ ವ್ಯವಸ್ಥಾಪನೆ ಅಧಿನಿಯಮ 1999ರ ಅಡಿಯಲ್ಲಿ ವಿವಿಧ ಜುಲ್ಮಾನೆಗಳು, (ದಂಡಗಳು) ಮತ್ತು ನ್ಯಾಯ ನಿರ್ಣಯ ಪ್ರಾಧಿಕಾರದ ಆದೇಶಗಳನ್ನು ಜಾರಿಗೊಳಿಸುವ ಬಗ್ಗೆ ಇರುವ ಉಪಬಂಧಗಳನ್ನು ವಿವರಿಸಿರಿ.

OR/**ಅಥವಾ**

Discuss the powers of the Competition Commission of India to enquire into agreements and dominant position of enterprise under the Competition Act 2002.

ಪೈಪೋಟಿ ಅಧಿನಿಯಮ 2002ರ ಅಡಿಯಲ್ಲಿ ಕರಾರುಗಳ ಮತ್ತು ಉದ್ಯಮ ಪ್ರಭುತ್ವ ಸ್ಥಾನಗಳ ಬಗ್ಗೆ ವಿಚಾರಣೆ ಮಾಡಲು ಭಾರತದ ಪೈಪೋಟಿ ಆಯೋಗಕ್ಕಿರುವ ಅಧಿಕಾರಗಳನ್ನು ಚರ್ಚಿಸಿರಿ.

(b) Write short note on : Marks : 5

ಲಘು ಟಿಪ್ಪಣಿ ಬರೆಯಿರಿ :

Adjudicating Authority (FEMA)

ನ್ಯಾಯ ನಿರ್ಣಯ ಅಧಿಕಾರಿ (ಫೆಮಾ) (ವಿವಿವ್ಯಅ)

OR/**ಅಥವಾ**

Enterprise (Competition Act)

ಉದ್ದಿಮೆ (ಪೈಪೋಟಿ ಅಧಿನಿಯಮ).

0202/0621

**II Semester 3 Year LL.B./VI Semester 5 Year B.B.A. LL.B./B.A. LL.B.**
**Examination, December 2014**
**COMPANY LAW**

Duration : 3 Hours                                                                 Max. Marks : 100

**Instructions** : 1. Answer Q. No. **9** and **any five** of the remaining questions.
2. Q. No. **9** carries **20** marks and the remaining questions carry **16** marks **each**.
3. Answers should be written either in **English** or in **Kannada** completely.

**ಸೂಚನೆಗಳು** : 1. ಪ್ರಶ್ನೆ ನಂ. **9** ಮತ್ತು ಇತರ ಯಾವುದೇ **5** ಪ್ರಶ್ನೆಗಳಿಗೆ ಉತ್ತರಿಸಿ.
2. ಪ್ರಶ್ನೆ ನಂ. **9**ಕ್ಕೆ **20** ಅಂಕಗಳು ಮತ್ತು ಉಳಿದ ಪ್ರಶ್ನೆಗೆ **16** ಅಂಕಗಳು.
3. ಉತ್ತರವನ್ನು ಸಂಪೂರ್ಣವಾಗಿ **ಕನ್ನಡದಲ್ಲಿ** ಅಥವಾ **ಇಂಗ್ಲಿಷ್‌ನಲ್ಲಿ** ಬರೆಯಿರಿ.

Q. No. 1. Discuss the advantages of incorporation of a company.

ಕಂಪನಿಯ ನಿಗಮೀಕರಣದ ಅನುಕೂಲತೆಗಳನ್ನು ಚರ್ಚಿಸಿರಿ.

Q. No. 2. What is incorporation and what are the different stages of incorporation.

ನಿಗಮೀಕರಣಗೊಳಿಸುವಿಕೆ ಎಂದರೇನು ? ಮತ್ತು ನಿಗಮೀಕರಣದ ವಿವಿಧ ಹಂತಗಳು ಯಾವುವು ?

Q. No. 3. What is memorandum of association of a company ? Explain the fundamental clauses of memorandum of association.

ಕಂಪನಿಯ ಸಂಸ್ಥಾಪನಾ ಪತ್ರ ಎಂದರೇನು ? ಸಂಸ್ಥಾಪನಾ ಪತ್ರದಲ್ಲಿನ ಮೂಲಭೂತ ಖಂಡಗಳನ್ನು ವಿವರಿಸಿರಿ.

Q. No. 4. Who is a promoter ? What are his powers and liabilities ?

ಪ್ರವರ್ತಕನೆಂದರೆ ಯಾರು ? ಅವನ ಅಧಿಕಾರ ಮತ್ತು ಹೊಣೆಗಾರಿಕೆಗಳಾವುವು ?

Q. No. 5. What is prospectus ? What are the remedies that are available for misrepresentation in the prospectus ?

ಪರಿಚಯಪತ್ರ ಎಂದರೇನು ? ಪರಿಚಯಪತ್ರದಲ್ಲಿನ ಸಂಗತಿಯ ತಪ್ಪು ನಿರೂಪಣೆಗೆ ಇರುವ ಪರಿಹಾರೋಪಾಯಗಳಾವುವು ?

Q. No. 6. Describe the general principles and statutory restrictions for allotment of shares.

ಶೇರುಗಳ ಹಂಚಿಕೆಯ ಸಾಮಾನ್ಯ ನಿಯಮಗಳು ಮತ್ತು ಶಾಸನಬದ್ಧ ನಿರ್ಬಂಧಗಳನ್ನು ವಿವರಿಸಿ.

Q. No. 7. Discuss briefly the conditions of relief for oppression and mis management in the company.

ಕಂಪನಿಯಲ್ಲಿ ದಬ್ಬಾಳಿಕೆಗೆ ಮತ್ತು ದುರ್ವ್ಯವಹಾರದ ಪರಿಹಾರದ ನಿರ್ಬಂಧಗಳನ್ನು ಚರ್ಚಿಸಿ.

Q. No. 8. Write short note on **any two** of the following :

(a) Holding and subsidiary company.

ನಿಯಂತ್ರಕ ಮತ್ತು ನಿಯಂತ್ರಿತ ಕಂಪನಿಗಳು

(b) Different kinds of share capital of a company

ಕಂಪನಿಯ ಶೇರು ಬಂಡವಾಳದ ವಿವಿಧ ಪ್ರಕಾರಗಳು

(c) Compulsory winding up of a company.

ಕಂಪನಿಯ ಕಡ್ಡಾಯ ಸಮಾಪನೆ.

Q. No. 9. Solve **any two** of the following problems :

(a) The articles of association of X company contained a clause to the effect that B (an outsider) should be a director and should not be removed for 5 years. However he was removed earlier and he brought an action to restrain company from excluding him will be succeed ?

X ಎಂಬ ಕಂಪನಿಯ ಲಿಖಿತ ಕಟ್ಟಳೆಯ ಒಂದು ಖಂಡದ ಪ್ರಕಾರ B (ಹೊರಗಿನ ವ್ಯಕ್ತಿ) ಎಂಬುವವನನ್ನು ಕಂಪನಿಯ ನಿರ್ದೇಶಕನನ್ನಾಗಿ ನೇಮಿಸುವುದು ಮತ್ತು 5 ವರ್ಷಗಳವರೆಗೆ ಅವನನ್ನು ಆ ಸ್ಥಾನದಿಂದ ತೆಗೆದುಹಾಕುವಂತಿಲ್ಲ ಎಂದು ಇತ್ತು ಆದರೆ ಅವನನ್ನು ಮುಂಚಿತವಾಗಿಯೇ ತೆಗೆದುಹಾಕಲಾಯಿತು. ಅದರ ವಿರುದ್ಧ ಅವನು ಕಂಪನಿಯ ಮೇಲೆ ದಾವೆಯನ್ನು ಹೂಡುತ್ತಾನೆ. ಅವನು ಜಯಗಳಿಸುವನೇ ?

(b) The director of a company borrowed a sum of money from the plaintiff bank. The company's articles provided that the director might borrow on bonds such sums as may from time to time be authorised by a resolution passed at general meeting of the company. Share holders claimed that there had been resolution authorising the loan and therefore it was taken without their authority. Is the company liable to the plaintiff bank ?

ಒಂದು ಕಂಪನಿಯ ನಿರ್ದೇಶಕನು ವಾದಿ ಬ್ಯಾಂಕಿನಿಂದ ಸಾಲವನ್ನು ಪಡೆಯುತ್ತಾನೆ. ಆ ಕಂಪನಿಯ ಲಿಖಿತ ಕಟ್ಟಳೆಯ ಪ್ರಕಾರ ನಿರ್ದೇಶಕರು ಸಾಲ ತೆಗೆದುಕೊಳ್ಳುವ ಮುನ್ನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿಯಮಾವಳಿಯನ್ನು ಪಾಸು ಮಾಡಿ ಶೇರುದಾರರ ಅನುಮತಿಯನ್ನು ಪಡೆದುಕೊಳ್ಳಬೇಕು ಹಾಗೂ ಅವರು ಎಷ್ಟು ಮೊತ್ತಕ್ಕೆ ಅನುಮತಿ ಕೊಟ್ಟಿರುತ್ತಾರೋ ಅಷ್ಟೇ ಮೊತ್ತವನ್ನು ಸಾಲ ಪಡೆಯಬೇಕು ಎಂಬುದಾಗಿತ್ತು. ಆದರೆ ಈ ಪ್ರಕರಣದಲ್ಲಿ ನಿರ್ದೇಶಕರು ಯಾವುದೇ ನಿಯಮಾವಳಿಯನ್ನು ಪಾಸು ಮಾಡಿರಲಿಲ್ಲ ಮತ್ತು ಶೇರುದಾರರ ಅನುಮತಿ ಇಲ್ಲದೆ ಸಾಲ ಪಡೆಯಲಾಗಿತ್ತು. ಕಂಪನಿಯ ವಾದಿ ಬ್ಯಾಂಕಿಗೆ ಬಾಧ್ಯಸ್ಥ/ ಹೊಣೆಗಾರವಾಗುತ್ತದೆಯೇ ?

(c) 'X' a minor was registered as a share holder. After attaining majority he received dividend from the company. Subsequently company went into liquidation X denies his liability. Decide.

'X' ಎಂಬ ಅಪ್ರಾಪ್ತ ವಯಸ್ಕನು ಒಂದು ಕಂಪನಿಯ ಸದಸ್ಯನಾಗಿ ನೋಂದಾಯಿಸಲ್ಪಟ್ಟನು. ಅವನು ಪ್ರಾಪ್ತ ವಯಸ್ಕನಾದ ಬಳಿಕ ಕಂಪನಿಯಿಂದ ಲಾಭಾಂಶವನ್ನು ಸ್ವೀಕರಿಸುತ್ತಾನೆ. ತದನಂತರ ಕಂಪನಿ ಸಮಾಪನೆಯಾಗುತ್ತದೆ. X ನು ತನ್ನ ಹೊಣೆಗಾರಿಕೆಯನ್ನು ಅಲ್ಲಗಳೆಯುತ್ತಾನೆ. ತೀರ್ಮಾನಿಸಿ.

0202/0621

# II Semester 3 Years LL.B./VI Semester 5 Years B.A. LL.B./B.B.A. LL.B. Examination, December 2015
# COMPANY LAW

Duration : 3 Hours Max. Marks : 100

**Instructions** : 1. Answer question No. **9** and **any 5 (five)** of the **remaining**.

2. Question No. **9** carries **20** marks and **remaining** questions carry **16** marks **each**.

3. Answer should be written either in **English** or **Kannada completely**.

Q. No. 1. Who is a promoter ? Discuss the legal position of a promoter under the Act. Marks : 16

ಪ್ರವರ್ತಕ ಅಂದರೆ ಯಾರು ? ಕಂಪನಿಯ ಅಧಿನಿಯಮದಡಿಯಲ್ಲಿ ಪ್ರವರ್ತಕನ ವಿಧಿ ಸಮ್ಮತವಾದ ಸ್ಥಾನದ ಬಗ್ಗೆ ಚರ್ಚಿಸಿ.

Q. No. 2. Explain the doctrine of Indoor Management. State the exceptions to the doctrine. Marks : 16

ಒಳಾಡಳಿತ ಸಿದ್ಧಾಂತವನ್ನು ವಿವರಿಸಿ. ಈ ಸಿದ್ಧಾಂತಕ್ಕಿರುವ ಅಪವಾದಗಳನ್ನು ಹೇಳಿರಿ.

Q. No. 3. Discuss the different types of meetings of a company. Explain the procedure and requirements of a valid meeting. Marks : 16

ಕಂಪನಿಯ ವಿವಿಧ ಬಗೆಯ ಸಭೆಗಳನ್ನು ಚರ್ಚಿಸಿ. ಶಾಸನ ಸಮ್ಮತ ಸಭೆಯ ವಿಧಾನ ಮತ್ತು ಅವಶ್ಯ ಸಂಗತಿಗಳನ್ನು ವಿವರಿಸಿ.

Q. No. 4. Who is a director ? How is he appointed ? What are their liabilities ? Marks : 16

ನಿರ್ದೇಶಕ ಎಂದರೆ ಯಾರು ? ಅವನನ್ನು ಹೇಗೆ ನೇಮಿಸಲಾಗುತ್ತದೆ ? ಅವರ ಬಾಧ್ಯತೆಗಳೇನು ?

Q. No. 5. Describe the procedure for effecting a transfer of shares. What are the remedies available to a person aggrieved by refusal to register a transfer of shares ? Marks : 16

ಶೇರುಗಳ ವರ್ಗಾವಣೆ ಮಾಡುವ ವಿಧಾನವನ್ನು ವಿವರಿಸಿ. ಶೇರುಗಳ ವರ್ಗಾವಣೆಯನ್ನು ನೋಂದಾಯಿಸಲು ನಿರಾಕರಿಸಿದಾಗ ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಲಭ್ಯವಿರುವ ಪರಿಹಾರಗಳಾವುವು ?

Q. No. 6. What is floating charge ? When will floating charge crystallise ? Marks : 16

ತೇಲುವ ಋಣಭಾರ (ಫ್ಲೋಟಿಂಗ್ ಚಾರ್ಜ್) ಎಂದರೇನು ? ಯಾವ ಸಂದರ್ಭಗಳಲ್ಲಿ ತೇಲುವ ಋಣಭಾರ (ಫ್ಲೋಟಿಂಗ್ ಚಾರ್ಜ್) ಸ್ಫಟಿಕೀಕರಣಗೊಳ್ಳುತ್ತದೆ ?

Q. No. 7. Explain when a court can order for winding up of a company ? Marks : 16

ಯಾವಾಗ ನ್ಯಾಯಾಲಯವು ಕಂಪೆನಿಯನ್ನು ಸಮಾಪನಗೊಳಿಸಲು ಆಜ್ಞೆ ಮಾಡಬಲ್ಲದು ಎಂಬುದನ್ನು ವಿವರಿಸಿ.

Q. No. 8. Write short notes on **any two** of the following : Marks : 8×2=16

ಯಾವುದಾದರೂ **ಎರಡರ** ಬಗ್ಗೆ ಟಿಪ್ಪಣಿ ಬರೆಯಿರಿ :

a) Duties of Debenture Trustees.
ಡಿಬೆಂಚರ್ ಟ್ರಸ್ಟಿಗಳ ಕರ್ತವ್ಯಗಳು.

b) Government Company.
ಸರ್ಕಾರದ ಕಂಪನಿ.

c) Pre-incorporation contracts.
ನಿಗಮೀಕರಣದ ಪೂರ್ವ ಒಪ್ಪಂದಗಳು.

Q. No. 9. Solve **any two** of the following problems : Marks : 10×2=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಯನ್ನು ಪರಿಹರಿಸಿ :

a) A public company was registered and incorporated after complying all the requirements of law. It issued prospects inviting the public to subscribe for its shares. Can it commence its business right from the date of incorporation ?

ಒಂದು ಸಾರ್ವಜನಿಕ ಕಂಪೆನಿ ಕಾನೂನಿನ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿ ನೋಂದಣಿ ಮಾಡಿ ಮತ್ತು ಸಂಯೋಜನೆಗೊಂಡಿತು. ಇದು ಪರಿಚಯ ಪತ್ರವನ್ನು ಬಿಡುಗಡೆಗೊಳಿಸುವುದರ ಮೂಲಕ ಸಾರ್ವಜನಿಕರನ್ನು ಚಂದಕ್ಕಾಗಿ ಆಹ್ವಾನಿಸಿದೆ. ಇದು ಸಂಯೋಜನೆಗೊಂಡ ದಿನಾಂಕದಿಂದಲೇ ತನ್ನ ಕೆಲಸಕಾರ್ಯಗಳನ್ನು ಪ್ರಾರಂಭಿಸಬಹುದೇ ?

b) The minority shareholders in a company brought an action against the directors alleging that they were responsible for losses which they had been incurred. Will they succeed in their action ?

ಕಂಪೆನಿ ಅನುಭವಿಸಿದ ನಷ್ಟಕ್ಕೆ ನಿರ್ದೇಶಕರು ಕಾರಣರೆಂದು ಆಪಾದಿಸಿ ಅಲ್ಪಸಂಖ್ಯಾತ ಷೇರುದಾರರು ಅವರ ವಿರುದ್ಧ ಕ್ರಮ ಜರುಗಿಸಿದರು. ಅವರು ತಮ್ಮ ಪ್ರಯತ್ನದಲ್ಲಿ ಯಶಸ್ಸು ಸಾಧಿಸುವರೇ ?

c) The Articles of a company only authorised it to expel a member. But the company wants to deprive the expelled member of his shares. Can the company do so ?

ಒಂದು ಕಂಪನಿಯ ಅಂತರ ನಿಯಮಾವಳಿಗಳು ಒಬ್ಬ ಸದಸ್ಯನನ್ನು ಹೊರದೂಡಲು/ ಉಚ್ಚಾಟಿಸಲು ಅದಕ್ಕೆ ಅಧಿಕಾರವನ್ನು ಕೊಟ್ಟಿರುತ್ತದೆ. ಆದರೆ ಕಂಪೆನಿಯು ಹೊರದೂಡಲ್ಪಟ್ಟ ಸದಸ್ಯನ ಷೇರುಗಳನ್ನು ಕಿತ್ತುಕೊಳ್ಳಲು ಇಚ್ಛಿಸುತ್ತದೆ. ಕಂಪನಿಯು ಈ ರೀತಿ ಮಾಡಬಹುದೇ ?

---

**0202/0621**

**II Semester 3 Year LL.B./VI Semester 5 Years B.A.LL.B./B.B.A.LL.B. Examination, December 2016**
**COMPANY LAW**

Duration : 3 Hours Max. Marks : 100

**Instructions** : 1. Answer Q. No. **9** and **any five** of the remaining questions.
2. Q. No. **9** carries **20** marks and the remaining questions carry **16** marks **each**.
3. Answers should be written **either** in English or Kannada **only**.

**ಸೂಚನೆಗಳು** : 1. ಪ್ರಶ್ನೆ **9** ಮತ್ತು ಇನ್ನುಳಿದ ಪ್ರಶ್ನೆಗಳಲ್ಲಿ ಯಾವುದೇ **ಐದು** ಪ್ರಶ್ನೆಗಳನ್ನು ಉತ್ತರಿಸಿರಿ.
2. ಪ್ರಶ್ನೆ **9** ಕ್ಕೆ **20** ಅಂಕಗಳು ಹಾಗೂ ಇನ್ನುಳಿದ ಪ್ರಶ್ನೆಗಳಿಗೆ ತಲಾ **16** ಅಂಕಗಳು.
3. ಉತ್ತರಗಳನ್ನು ಆಂಗ್ಲ ಭಾಷೆಯಲ್ಲಾಗಲಿ ಅಥವಾ ಕನ್ನಡದಲ್ಲಾಗಲಿ **ಬರೆಯತಕ್ಕದ್ದು.**

Q. No. 1. Explain the circumstances in which the "Corporate Veil" of the company will be lifted by the court. Marks : 16

ನ್ಯಾಯಾಲಯದಿಂದ ಕಂಪನಿಯ ಸಂಸ್ಥಾ ಸ್ವರೂಪದ ಮುಸುಕನ್ನು ಸರಿಸಲು ನೀಡುವ ಆದೇಶಕ್ಕೆ ಇರುವ ಸಂದರ್ಭಗಳನ್ನು ವಿವರಿಸಿ.

Q. No. 2. "Company cannot be sued for pre-incorporation contracts." Discuss. Marks : 16

''ಸಂಸ್ಥಾಪನಾ ಪೂರ್ವ ಕರಾರುಗಳಿಗೆ ಕಂಪನಿಯ ವಿರುದ್ಧ ದಾವೆ ಹೂಡುವಂತಿಲ್ಲ.'' ಚರ್ಚಿಸಿರಿ.

Q. No. 3. Explain the doctrine of Indoor Management with exceptions. Marks : 16

ಒಳಾಡಳಿತ ಸಿದ್ಧಾಂತವನ್ನು ಅಪವಾದಗಳೊಂದಿಗೆ ವಿವರಿಸಿ.

Q. No. 4. Define "Prospectus". What are the remedies available for misrepresentation in the prospectus ? Explain. Marks : 16

''ಪರಿಚಯ ಪತ್ರ''ವನ್ನು ವ್ಯಾಖ್ಯಾನಿಸಿ. ಪರಿಚಯ ಪತ್ರದಲ್ಲಿನ ತಪ್ಪು ಹೇಳಿಕೆಗಳಿಗೆ ಇರುವ ಪರಿಹಾರಗಳಾವುವು ? ವಿವರಿಸಿ.

**P.T.O.**

Q. No. 5. State the powers and duties of directors in the company. Marks : 16

ಕಂಪನಿಯ ನಿರ್ದೇಶಕರ ಅಧಿಕಾರ ಮತ್ತು ಕರ್ತವ್ಯಗಳನ್ನು ತಿಳಿಸಿರಿ.

Q. No. 6. Explain the different types of share capital. Marks : 16

ಶೇರು ಬಂಡವಾಳದ ವಿವಿಧ ಪ್ರಕಾರಗಳನ್ನು ವಿವರಿಸಿ.

Q. No. 7. Discuss the members' voluntary winding up of the company. Marks : 16

ಸದಸ್ಯರ ಸ್ವ-ಇಚ್ಛೆಯಿಂದ ಕಂಪನಿಯ ಸಮಾಪನೆಯ ಕುರಿತು ಚರ್ಚಿಸಿ.

Q. No. 8. Write short notes on **any two** of the following : Marks : 8×2=16

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

a) Doctrine of ultra vires.

ಅಧಿಕಾರಾತೀತ ಸಿದ್ಧಾಂತ.

b) Forfeiture of shares.

ಶೇರುಗಳ ಮುಟ್ಟುಗೋಲು.

c) Rule laid down in "Foss V/s Harbottle".

''ಫೋಸ್ ವಿರುದ್ಧ ಹರಬಾಟಲ್'' ಪ್ರಕರಣದಲ್ಲಿನ ನಿಯಮ.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳಿಗೆ ಪರಿಹಾರ ತಿಳಿಸಿರಿ :

a) 'A' transferred certain land to 'B' on a condition that 'B' would never sell the land to coloured persons. 'B' sold the land to a company composed exclusively of Negros. 'A' took action for the annulment of the transfer on the ground that property had passed to coloured persons. Will he succeed ?

'ಅ' ತನ್ನ ಭೂಮಿಯನ್ನು ವರ್ಣೀಯ ಜನರಿಗೆ ಮಾರಬಾರದೆಂಬ ಷರತ್ತಿನೊಂದಿಗೆ 'ಬ'ನಿಗೆ ಮಾರುವನು. 'ಬ' ನು ಅದನ್ನು ನಿಗ್ರೋಗಳಿಂದಲೇ ಕೂಡಿದ ಕಂಪನಿಗೆ ಮಾರುತ್ತಾನೆ. 'ಅ' ನು ತನ್ನ ಷರತ್ತು ಉಲ್ಲಂಘನೆಯಾಗಿದೆ ಎಂಬ ಕಾರಣದ ಮೇಲೆ ಮಾರಾಟವನ್ನು ರದ್ದುಗೊಳಿಸುವಂತೆ ದಾವೆ ಹೂಡುವನು. ಅವನು ಜಯ ಗಳಿಸುವನೇ ?

b) A Company's Articles provides that a member who becomes bankrupt shall often for sale of his shares to other share holders at the price fixed by the directors. Decide the validity of the provision.

ಒಂದು ಕಂಪನಿಯ ಲಿಖಿತ ಕಟ್ಟಳೆಯು ತನ್ನ ಸದಸ್ಯರು ದಿವಾಳಿಯಾಗಿದ್ದಲ್ಲಿ ಆತನು ತನ್ನೆಲ್ಲಾ ಶೇರುಗಳನ್ನು ಇತರ ಶೇರುದಾರರಿಗೆ ಕಂಪನಿಯ ನಿರ್ದೇಶಕರು ಗೊತ್ತುಪಡಿಸಿದ ಬೆಲೆಗೆ ಮಾರಾಟ ಮಾಡಬೇಕೆಂಬ ನಿಯಮವನ್ನು ಹೊಂದಿರುತ್ತದೆ. ಈ ನಿಯಮಾವಳಿಯ ಊರ್ಜಿತತೆಯನ್ನು ನಿರ್ಧರಿಸಿ.

c) The directors of a company by two resolutions resolved to make a call. But neither resolutions have specified the date and amount of payment. Is the call valid ?

ಒಂದು ಕಂಪನಿಯ ನಿರ್ದೇಶಕರು ಶೇರುಗಳ ಮೇಲಿನ ಕಂತು ಹಣಕ್ಕಾಗಿ ಎರಡು ಗೊತ್ತುವಳಿಗಳ ಮೂಲಕ ಕರೆ ಮಾಡಿದರು, ಆದರೆ ಯಾವುದೇ ಗೊತ್ತುವಳಿಯಲ್ಲೂ ದಿನಾಂಕ ಮತ್ತು ಹಣದ ಮೊತ್ತವನ್ನು ನಮೂದಿಸಿರುವುದಿಲ್ಲ. ಈ ಕರೆಯು ಊರ್ಜಿತವೇ ?

---

0202 / 0621

**Second Semester of 3 Year LL.B. / VI Semester of B.A. LL.B. / B.B.A. LL.B. ( 5 Years) Examination, December 2013**
**COMPANY LAW (Course – II)**

Duration : 3 Hours Max. Marks : 100

**Instructions** : 1. Answer **all 5** questions.

2. **One** essay type question and **one** short note question or problem from **each** Unit which is referred as Part **(a)** and Part **(b)** in **all** the Units.

3. Figures to the **right** indicate **full** marks.

4. Answer should be written either in **English** or **Kannada completely.**

**UNIT – I**

Q. No.1. (a) Explain the fundamental clauses of Memorandum of Association of a company. Marks : 15

ಕಂಪನಿಯ ಸಂಸ್ಥಾಪನ ಪತ್ರದಲ್ಲಿನ ಮೂಲಭೂತ ಖಂಡಗಳನ್ನು ವಿವರಿಸಿರಿ.

OR/**ಅಥವಾ**

Who is promoter ? What are his powers and liabilities ?

ಪ್ರವರ್ತಕನೆಂದರೆ ಯಾರು ? ಅವನ ಅಧಿಕಾರಗಳು ಮತ್ತು ಹೊಣೆಗಾರಿಕೆಗಳಾವುವು ?

(b) Write a note on certificate of incorporation. Marks : 5

ಸಂಯೋಜನಾ ಪ್ರಮಾಣ ಪತ್ರದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

OR/**ಅಥವಾ**

'A' holds almost all shares except one in Timber Company and he was substantial creditor also. 'A' insured the company's timber in his own name. Timber having been destroyed by fire, he claims compensation from the insurance company. Will he succeed ?

ಒಂದು ಮರಮುಟ್ಟು ಕಂಪನಿಯಲ್ಲಿ 'A' ನು ಒಂದು ಶೇರನ್ನು ಬಿಟ್ಟು ಎಲ್ಲಾ ಶೇರನ್ನು ಹೊಂದಿದ್ದನು ಮತ್ತು ಅವನು ಕಂಪನಿಗೆ ಗಣನೀಯವಾಗಿ ಸಾಲ ಕೊಟ್ಟಿದ್ದನು. 'A'ನು ಕಂಪನಿಯ ಮರಮುಟ್ಟುಗಳನ್ನು ತನ್ನ ಹೆಸರಿನಲ್ಲಿ ವಿಮೆ ಮಾಡಿಸಿದ್ದನು. ಬೆಂಕಿಯಿಂದ ಮರಮುಟ್ಟುಗಳು ನಾಶವಾದಾಗ ಅವನು ವಿಮಾ ಕಂಪನಿಯಿಂದ ಪರಿಹಾರ ಕೇಳುತ್ತಾನೆ. ಅವನು ಗೆಲ್ಲುವನೇ ?

## UNIT – II

Q. No.2. (a) Notice and Quorum are the essentials of company's valid meeting. Discuss. Marks : 15

ಸೂಚನೆ ಮತ್ತು ಕೋರಂ ಕಂಪನಿಯ ಕ್ರಮಬದ್ಧ ಸಭೆಯ ಅವಶ್ಯ ಸಂಗತಿಗಳು. ಚರ್ಚಿಸಿರಿ.

OR/**ಅಥವಾ**

Damages for deceit is one of the remedy for misrepresentation in the prospectus. Elucidate.

ವಂಚನೆಗೆ ನಷ್ಟ (ಹಾನಿ) ಪರಿಹಾರವು ಪರಿಚಯ ಪತ್ರಿಕೆಯಲ್ಲಿನ ಅಸತ್ಯ ನಿರೂಪಣೆಗೆ ಒಂದು ಪರಿಹಾರೋಪಾಯವಾಗಿದೆ. ವಿಷದೀಕರಿಸಿ.

(b) The plaintiff was a transferee of a share certificate issued under the seal of the defendant company. The certificate was issued by the company's secretary, who afixed the seal of the company and forged the signatures of the two directors. Advise the Plaintiff. Marks : 5

ವಾದಿಯು ಪ್ರತಿವಾದಿ ಕಂಪನಿಯ ಮುದ್ರೆ (ಮೊಹರು) ಯಿಂದ ಬಿಡುಗಡೆ ಮಾಡಿದ ಶೇರು ಪತ್ರದ ವರ್ಗಾವಣೆ ಧಾರಕನಾಗಿದ್ದನು. ಕಂಪನಿಯ ಕಾರ್ಯದರ್ಶಿಯು ಕಂಪನಿಯ ಮೊಹರನ್ನು ಶೇರು ಪತ್ರದ ಮೇಲೆ ಹಾಕಿ ಮತ್ತು ಇಬ್ಬರು ನಿರ್ದೇಶಕರ ಖೊಟ್ಟಿ ಸಹಿಯನ್ನು ಮಾಡಿ ಜಾರಿಗೊಳಿಸಿದ್ದನು. ವಾದಿಗೆ ಸಲಹೆ ನೀಡಿರಿ.

OR/**ಅಥವಾ**

Write a brief note on powers of directors.

ನಿರ್ದೇಶಕರ ಅಧಿಕಾರಗಳ ಬಗ್ಗೆ ಒಂದು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

## UNIT – III

Q. No.3. (a) What is voluntary winding up ? Discuss members voluntary winding up of a company. Marks : 15

ಸ್ವಇಚ್ಛೆ ಸಮಾಪನೆ ಎಂದರೇನು ? ಒಂದು ಕಂಪನಿಯ ಸದಸ್ಯರ ಸ್ವಇಚ್ಛೆ ಸಮಾಪನೆಯ ಬಗ್ಗೆ ಚರ್ಚಿಸಿರಿ.

OR/**ಅಥವಾ**

Discuss the different kinds of share capital of a company.

ಒಂದು ಕಂಪನಿಯ ಶೇರು ಬಂಡವಾಳದ ವಿವಿಧ ಪ್ರಕಾರಗಳನ್ನು ಚರ್ಚಿಸಿರಿ.

(b) 'X' a minor was registered as a share holder. After attaining majority he received dividend from the company. Subsequently the company went into liquidation. 'X' denies his liability. Decide. Marks : 5

'X' ಎಂಬ ಅಪ್ರಾಪ್ತ ವಯಸ್ಕನು ಒಂದು ಕಂಪನಿಯ ಸದಸ್ಯನಾಗಿ ನೋಂದಾಯಿಸಲ್ಪಟ್ಟನು. ಅವನು ಪ್ರಾಪ್ತ ವಯಸ್ಕನಾದ ಬಳಿಕ ಕಂಪನಿಯಿಂದ ಲಾಭಾಂಶವನ್ನು ಸ್ವೀಕರಿಸುತ್ತಾನೆ. ತದನಂತರ ಕಂಪನಿ ಸಮಾಪನೆ ಆಗುತ್ತದೆ. 'X'ನು ತನ್ನ ಹೊಣೆಗಾರಿಕೆಯನ್ನು ಅಲ್ಲಗಳೆಯುತ್ತಾನೆ. ತೀರ್ಮಾನಿಸಿರಿ.

OR/**ಅಥವಾ**

Write a note on prevention of mismanagement.

ದುರ್ವ್ಯವಸ್ಥಾಪನೆ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

**UNIT – IV**

Q. No.4. (a) Explain the procedures, powers and functions of the Securities Appellate Tribunal under the SEBI Act, 1992. Marks : 15

ಸೆಬಿ ಅಧಿನಿಯಮ 1992ರ ಅಡಿಯಲ್ಲಿ ಭದ್ರತಾ ಪತ್ರಗಳ ಮೇಲ್ಮನವಿ ನ್ಯಾಯಾಧೀಕರಣದಲ್ಲಿಯ ಪ್ರಕ್ರಿಯೆಗಳು, ಅಧಿಕಾರಗಳು ಮತ್ತು ಕಾರ್ಯಗಳನ್ನು ವಿವರಿಸಿರಿ.

OR/**ಅಥವಾ**

Write an explanatory note on registration of stock brokers, sub-brokers and share transfer agents.

ಸ್ಟಾಕ್ ದಳ್ಳಾಳಿಗಳು, ಉಪದಳ್ಳಾಳಿಗಳು ಮತ್ತು ಶೇರು ವರ್ಗಾವಣೆ ಕಾರ್ಯಭಾರಿಗಳ ನೋಂದಣಿ ಬಗ್ಗೆ ಒಂದು ವಿವರವಾದ ಟಿಪ್ಪಣಿ ಬರೆಯಿರಿ.

(b) Write a note on definition of securities. Marks : 5

ಭದ್ರತಾ ಪತ್ರಗಳ ವ್ಯಾಖ್ಯಾನದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

OR/**ಅಥವಾ**

Make a note on powers of SEBI under Securities Contracts (Regulation) Act, 1956.

ಭದ್ರತಾ ಪತ್ರಗಳ ಕರಾರು (ನಿಯಂತ್ರಣ) ಅಧಿನಿಯಮ1956ದಡಿಯಲ್ಲಿ ಸೆಬಿಗೆ ಇರುವ ಅಧಿಕಾರಗಳ ಬಗ್ಗೆ ಒಂದು ಟಿಪ್ಪಣಿ ಮಾಡಿರಿ.

## UNIT – V

Q. No.5. (a) Explain the establishment, power and functions of special Director (appeal) and Appellate Tribunal under the FEMA Act, 1999. Marks : 15

ವಿದೇಶಿ ವಿನಿಮಯ ವ್ಯವಸ್ಥಾಪನೆ ಅಧಿನಿಯಮ 1999ರ ಅಡಿಯಲ್ಲಿ ವಿಶೇಷ ನಿರ್ದೇಶಕರು (ಮೇಲ್ಮನವಿ) ಮೇಲ್ಮನವಿ ಪ್ರಾಧಿಕಾರದ ರಚನೆ, ಅಧಿಕಾರಗಳು ಮತ್ತು ಕಾರ್ಯಗಳ ಬಗ್ಗೆ ವಿವರಿಸಿರಿ.

OR/**ಅಥವಾ**

Define "Consumer" and "Service" under the Competition Act, 2002.

ಪೈಪೋಟಿ ಕಾಯಿದೆ ಅಧಿನಿಯಮ 2002ರ ಅಡಿಯಲ್ಲಿ ''ಗ್ರಾಹಕ'' ಮತ್ತು ''ಸೇವೆ'' ಯನ್ನು ವ್ಯಾಖ್ಯಾನಿಸಿರಿ.

(b) Write short notes on : Marks : 5

Goods (Competition Act)

ಲಘು ಟಿಪ್ಪಣಿ ಬರೆಯಿರಿ :

ಸರಕುಗಳು (ಪೈಪೋಟಿ ಕಾಯಿದೆ ಅಧಿನಿಯಮ)

OR/**ಅಥವಾ**

Adjudicating authority (FEMA Act)

ನ್ಯಾಯ ನಿರ್ಣಯ ಅಧಿಕಾರಿ (ಫೆಮಾ ಅಧಿನಿಯಮ)

0202/0621

**II Semester of Three Year LL.B., VI Semester of Five Year B.A.LL.B./ B.B.A.LL.B. Examination, June 2013**

**COMPANY LAW**

Duration : 3 Hours Max. Marks : 100

**Instructions** : 1. Answer all **5** Questions.
2. **One** essay type and **one** short note question or problem from **each unit** have to be attempted.
3. Figures to the right indicate marks.
4. Answers should be written **either** in English or Kannada **completely**.

**UNIT – I**

Q. No. 1. (a) 'Company is totally different from its members'. Explain. Marks : 15

'ಕಂಪನಿಯು ತನ್ನ ಸದಸ್ಯರಿಂದ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ವಿವರಿಸಿ.

OR/**ಅಥವಾ**

Discuss the nature of holding company and subsidiary company.

ನಿಯಂತ್ರಕ ಮತ್ತು ಸಹಾಯಕ ಕಂಪನಿಗಳ ಸ್ವರೂಪವನ್ನು ಚರ್ಚಿಸಿ.

(b) A company change its name from Mahti Tea Syndicate Ltd.' to 'Mahti Tea Industrial Ltd.' But the company filed a writ petition in its old name. Is the petition is enforceable ? Marks : 5

ಒಂದು ಕಂಪನಿಯು ತನ್ನ ಹೆಸರನ್ನು 'ಮಹತಿ ಟೀ ಸಿಂಡಿಕೇಟ್ ಲಿ.' ಎಂಬ ಹೆಸರಿನಿಂದ 'ಮಹತಿ ಟೀ ಇಂಡಸ್ಟ್ರೀಯಲ್ ಲಿ.' ಎಂದು ಬದಲಾಯಿಸಿಕೊಂಡಿತು. ಆದರೆ ಕಂಪನಿಯು ಒಂದು ರಿಟ್‌ನ್ನು ತನ್ನ ಹಳೆಯ ಹೆಸರಿನಲ್ಲಿಯೇ ದಾಖಲು ಮಾಡಿದೆ. ಈ ರಿಟ್ ಪೆಟಿಷನ್‌ನನ್ನು ಜಾರಿಗೊಳಿಸಬಹುದೇ ?

OR/**ಅಥವಾ**

Mr. R was the transferee of a share certificate issued under the seal of the 'G' company. The certificate was issued by the company secretary, who had affixed the seal of the company and forged their signature of two directors. Whether the share certificate is valid ?

ಮಿ. 'R' ಎಂಬುವನು 'G' ಕಂಪನಿಯ ಸೀಲ್‌ನ ಅಡಿಯಲ್ಲಿ ಬಿಡುಗಡೆ ಮಾಡಿದ ಶೇರ್ ಸರ್ಟಿಫಿಕೇಟ್‌ನ್ನು ವರ್ಗಾವಣೆ ಪಡೆದವನು. ಶೇರು ಸರ್ಟಿಫಿಕೇಟ್‌ನ್ನು ಕಂಪನಿಯ ಕಾಯದರ್ಶಿ ಬಿಡುಗಡೆ ಮಾಡಿರುತ್ತಾನೆ. ಇವನು ಕಂಪನಿಯ ಸೀಲ್‌ನ್ನು ಹಾಕಿ ಹಾಗೂ ಇಬ್ಬರು ನಿರ್ದೇಶಕರ ಸುಳ್ಳು ಸಹಿಯನ್ನು ಮಾಡಿರುತ್ತಾನೆ. ಶೇರು ಸರ್ಟಿಫಿಕೇಟ್ ಕಾನೂನು ಬದ್ಧವೇ ?

## UNIT – II

Q. No. 2. (a) Define Articles of association. Explain the alteration of Articles of association under Companies Act. Marks : 15

ಲಿಖಿತ ಕಟ್ಟಾಳೆ ವ್ಯಾಖ್ಯಾನಿಸಿ. ಕಂಪನಿ ಕಾಯಿದೆಯ ಅಡಿಯಲ್ಲಿ ಲಿಖಿತ ಕಟ್ಟಾಳೆಯ ಬದಲಾವಣೆಯನ್ನು ವಿವರಿಸಿ.

OR/**ಅಥವಾ**

'Director are described as agents, trustee and as managing partner' – Analyse.

'ನಿರ್ದೇಶಕರನ್ನು ಪ್ರತಿನಿಧಿ, ನ್ಯಾಸಧಾರಿ ಮತ್ತು ಆಡಳಿತ ಪಾಲುದಾರರು ಎಂದು ವರ್ಣಿಸಲಾಗಿದೆ.' – ವಿಶ್ಲೇಷಿಸಿ.

(b) In a Private Company There are only two directors on Board of the ocmpany. one director was refused to support in the decision taking on a subject in the meeting. There was no provision in the articles to increase or decrease the number of directors. Advise the director. Marks : 5

ಒಂದು ಖಾಸಗಿ ಕಂಪನಿಯಲ್ಲಿ ಇಬ್ಬರೇ ನಿರ್ದೇಶಕರು ಕಂಪನಿಯ ನಿರ್ದೇಶಕರ ಮಂಡಳಿಯಲ್ಲಿ ಇದ್ದರು. ಒಬ್ಬ ನಿರ್ದೇಶಕನು ಸಭೆಯಲ್ಲಿ ಒಂದು ವಿಷಯದ ಮೇಲೆ ನಿರ್ಣಯ ತೆಗೆದುಕೊಳ್ಳುವಾಗ ತನ್ನ ಬೆಂಬಲವನ್ನು ತಿರಸ್ಕರಿಸಿದನು. ಲಿಖಿತ ಕಟ್ಟಳೆಯಲ್ಲಿ ನಿರ್ದೇಶಕರ ಸಂಖ್ಯೆಯನ್ನು ಹೆಚ್ಚಿಗೆ ಅಥವಾ ಕಡಿಮೆ ಮಾಡುವ ಯಾವುದೇ ನಿಯಮಾವಳಿ ಇರುವುದಿಲ್ಲಾ. ನಿರ್ದೇಶಕನಿಗೆ ಸಲಹೆ ನೀಡಿ.

OR/**ಅಥವಾ**

Certain directors held a meeting of the Board. But they prevented some lawfully constituted directors from attending the meeting. A quorum was however present. Whether the Board meeting is valid ?

ಕೆಲವು ನಿರ್ದೇಶಕರು ಮಂಡಳಿಯ ಸಭೆಯನ್ನು ನಡೆಸುತ್ತಾರೆ. ಆದರೆ ಅವರು ಕೆಲವು ಕಾನೂನು ಬದ್ಧ ಮಂಡಳಿಯ ನಿರ್ದೇಶಕರು ಸಭೆಗೆ ಹಾಜರಾಗುವುದನ್ನು ತಡೆಯುತ್ತಾರೆ. ಆದಾಗ್ಯೂ ಸಭೆಯಲ್ಲಿ ಕೊರಂ ಇರುತ್ತದೆ. ಮಂಡಳಿಯ ಸಭೆಯು ಕಾನೂನು ಬದ್ಧವೇ ?

## UNIT – III

Q. No. 3. (a) Describe the general principles and statutory restriction for allotment of shares. Marks : 15

ಶೇರುಗಳ ಹಂಚಿಕೆಯ ಸಾಮಾನ್ಯ ನಿಯಮಾವಳಿಗಳು ಮತ್ತು ಶಾಸನಬದ್ಧ ನಿರ್ಬಂಧಗಳನ್ನು ವಿವರಿಸಿ.

OR/**ಅಥವಾ**

Discuss briefly the conditions of relief for oppression in the company.

ಕಂಪನಿಯಲ್ಲಿ ದಬ್ಬಾಳಿಕೆಯ ಪರಿಹಾರದ ನಿರ್ಬಂಧಗಳನ್ನು ಚರ್ಚಿಸಿ.

(b) K was Bearer debenture holder of S Company . He transfered the same to R. The company refused to pay the amount with interest to him. Whether R can claim it ? Marks : 5

K ಎಂಬವನು S ಕಂಪನಿಯ ದಾರಕ ಸಾಲಪತ್ರವನ್ನು ಹೊಂದಿರುತ್ತಾನೆ. ಇವನು ಅದನ್ನು R ಗೆ ವರ್ಗಾಯಿಸುತ್ತಾನೆ. ಕಂಪನಿಯು ಹಣವನ್ನು ಬಡ್ಡಿ ಸಮೇತವಾಗಿ ನೀಡಲು ಈತನಿಗೆ ತಿರಸ್ಕರಿಸುತ್ತದೆ. R ನು ಇದನ್ನು ಪಡೆದು ಕೊಳ್ಳಬಹುದೇ ?

OR/**ಅಥವಾ**

The preferential shareholders were entitled to a preference divided at the rate of 10% per annum and it was specified in the Articles of association of the company. The earned huge profit in the financial year. Preferential shareholders are claimed 15% dividend in the company. The company was refused to pay the 15% of dividend. Is the preferential shareholders are entitled for 15 % of dividend ?

ಆದ್ಯತೆ ಶೇರುದಾರರು ವಾರ್ಷಿಕ ಶೇ. 10%ರಂತೆ ಆದ್ಯತೆಯ ಲಾಭಾಂಶವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ ಮತ್ತು ಇದನ್ನು ಕಂಪನಿಯ ಲಿಖಿತ ಕಟ್ಟಾಳೆಯಲ್ಲಿ ನಿರ್ದಿಷ್ಟಪಡಿಸಲಾಗುತ್ತದೆ. ಕಂಪನಿಯು ಆರ್ಥಿಕ ವರ್ಷದಲ್ಲಿ ಹೆಚ್ಚಿಗೆ ಲಾಭಾಂಶವನ್ನು ಗಳಿಸುತ್ತದೆ. ಆದ್ಯತೆಯ ಶೇರುದಾರರು ಶೇ.15% ರಂತೆ ಆದ್ಯತೆಯ ಲಾಭಾಂಶವನ್ನು ನೀಡುವಂತೆ ಕೇಳುತ್ತಿದ್ದಾರೆ. ಆದ್ಯತೆಯ ಶೇರುದಾರರು ಶೇ. 15%ರಷ್ಟು ಲಾಭಾಂಶಕ್ಕೆ ಹಕ್ಕುವುಳ್ಳವರೇ ?

## UNIT – IV

Q. No. 4. (a) State the Penalties and Adjudication provisions of securities and exchange Board of India under SEBI Act. Marks : 15

ಸೆಬಿ ಕಾಯಿದೆಯ ಅಡಿಯಲ್ಲಿ ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿಯ ದಂಡಗಳು ಮತ್ತು ನಿರ್ಣಯದ ನಿಯಮಾವಳಿಗಳನ್ನು ತಿಳಿಸಿ.

OR/**ಅಥವಾ**

Analyse the powers of recognised stock exchange to make the bye-laws under the Securities Contracts (Regulation) Act.

ಭದ್ರತೆಗಳ ಕರಾರು (ನಿಯಂತ್ರಣ) ಕಾಯಿದೆ ಅಡಿಯಲ್ಲಿ ಅಂಗೀಕೃತ ಶೇರು ಮಾರುಕಟ್ಟೆಯು ಉಪ-ನಿಯಮಗಳನ್ನು ಮಾಡುವ ಅಧಿಕಾರವನ್ನು ವಿಶ್ಲೇಷಿಸಿ.

(b) Write a note on offences by companies Under Securities Contracts (Regulation) Act. Marks : 5

ಭದ್ರತೆಗಳ ಕರಾರು (ನಿಯಂತ್ರಣ) ಕಾಯಿದೆ ಅಡಿಯಲ್ಲಿ ಕಂಪನಿಗಳ ಅಪರಾಧದ ಮೇಲೆ ಒಂದು ಟಿಪ್ಪಣಿ ಬರೆಯಿರಿ.

OR/**ಅಥವಾ**

Meeting of SEBI.

ಸೆಬಿಯ ಸಭೆಗಳು.

## UNIT – V

Q. No. 5. (a) Explain the composition, procedure and powers of appellate tribunal under the FEMA Act 1999. Marks : 15

ಫೇಮಾ ಕಾಯಿದೆ 1999 ರ ಅಡಿಯಲ್ಲಿ ಮೇಲ್ಮನವಿ ನ್ಯಾಯಾಧೀಕರಣದ ರಚನೆ, ಪ್ರಕ್ರಿಯೆ ಮತ್ತು ಅಧಿಕಾರಗಳನ್ನು ವಿವರಿಸಿ.

OR/**ಅಥವಾ**

State the powers and functions of competition commission of India.

ಭಾರತದ ಪೈಪೋಟಿ ಆಯೋಗದ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ತಿಳಿಸಿ.

(b) Write a note on competition advocacy. Marks : 5

ಪೈಪೋಟಿ ವಕೀಲತನದ ಮೇಲೆ ಒಂದು ಟಿಪ್ಪಣಿ ಬರೆಯಿರಿ.

OR/**ಅಥವಾ**

Authorised person under FEMA.

ಫೇಮ ಅಡಿಯಲ್ಲಿ ಅಧಿಕೃತ ವ್ಯಕ್ತಿ.

0202/0621

**II Semester of 3 Years LL.B. /VI Semester of 5 Years B.A. LL.B. /B.B.A. LL.B. Examination, June/July 2014**

# COMPANY LAW

Duration : 3 Hours Max. Marks : 100

**Instructions** : 1. Answer all **5** Questions.

2. Figures to the **right** indicate marks.

3. Answers should be written either in **English** or **Kannada** completely.

## UNIT – I

Q. No. 1. (a) What are the advantages of incorporation of a company ? Marks : 15

ಕಂಪನಿಯನ್ನು ನಿಗಮೀಕರಣಗೊಳಿಸುವುದರಿಂದ ಆಗುವ ಅನುಕೂಲತೆಗಳು ಯಾವುವು ?

OR/**ಅಥವಾ**

Who is a Promoter ? What are his duties and liabilities ?

ಪ್ರವರ್ತಕನೆಂದರೆ ಯಾರು ? ಪ್ರವರ್ತಕನ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಯಾವುವು ?

(b) Write a note on : Marks : 5

Different types of companies.

ವಿವಿಧ ಬಗೆಯ ಕಂಪನಿಗಳು.

OR/**ಅಥವಾ**

Lifting the corporate veil.

ಸಂಸ್ಥಾ ಸ್ವರೂಪದ ಮುಖವಾಡವನ್ನು ಎತ್ತುವಿಕೆ.

**P.T.O.**

## UNIT – II

Q. No. 2. (a) Explain the procedure for incorporation of a company. Marks : 15

ಕಂಪನಿಯನ್ನು ನಿಗಮೀಕರಣಗೊಳಿಸುವ ಪ್ರಕ್ರಿಯೆಯನ್ನು ವಿವರಿಸಿ.

OR/**ಅಥವಾ**

What is prospectus ? Explain its contents.

ಪರಿಚಯ ಪತ್ರ ಎಂದರೇನು ? ಅದರ ಒಳಾಂಶಗಳನ್ನು ವಿವರಿಸಿ.

(b) A company's Articles provides that a member who becomes bankrupt shall offer for sale of his shares to other share holders at a price fixed by Directors. Decide the validity of the provision. Marks : 5

ಒಂದು ಕಂಪನಿಯ ನಿಯಮಾವಳಿಗಳು ಯಾವುದೇ ಒಬ್ಬ ಸದಸ್ಯನು ದಿವಾಳಿಖೋರನಾಗಿದ್ದಲ್ಲಿ ತನ್ನೆಲ್ಲಾ ಶೇರುಗಳನ್ನು ಇನ್ನುಳಿದ ಶೇರುದಾರರಿಗೆ ಕಂಪನಿಯ ನಿರ್ದೇಶಕರು ಗೊತ್ತುಪಡಿಸಿದ ಬೆಲೆಗೆ ಮಾರಾಟ ಮಾಡಬೇಕು ಎಂದು ಇದೆ. ಈ ನಿಯಮಾವಳಿಗಳ ಊರ್ಜಿತತೆಯನ್ನು ನಿರ್ಧರಿಸಿರಿ.

OR/**ಅಥವಾ**

The Articles of Association of a company contained a clause that R should be a legal advisor for a period of 5 years and he should not be removed until the expiry of 5 years. He was a member of that company. But he was removed after one year of his appointment. He brought an action against the company and claimed damages for premature removal. Will he succeed ?

ಕಂಪನಿಯ ಲಿಖಿತ ಕಟ್ಟಳೆಯು 'R' ಎಂಬುವನನ್ನು 5 ವರ್ಷಗಳವರೆಗೆ ಕಂಪನಿಯ ಕಾನೂನು ಸಲಹೆಗಾರನಾಗಬೇಕೆಂದು ಮತ್ತು ಆ 5 ವರ್ಷಗಳ ಅವಧಿ ಪೂರ್ವದಲ್ಲಿ ಅವನನ್ನು ತೆಗೆಯಕೂಡದೆಂದು ಕಲಂ ಹೊಂದಿದೆ. ಅವನು ಆ ಕಂಪನಿಯ ಸದಸ್ಯನಾಗಿರುತ್ತಾನೆ. ಆದರೆ ಅವನನ್ನು ನೇಮಕ ಮಾಡಿದ ಒಂದು ವರ್ಷದ ನಂತರ ತೆಗೆದು ಹಾಕಲಾಯಿತು. 'R' ನು ಒಪ್ಪಂದದ ಉಲ್ಲಂಘನೆಗಾಗಿ ಕಂಪನಿಯ ವಿರುದ್ಧ ಪರಿಹಾರ ಕೇಳಿ ದಾವೆ ಹಾಕುತ್ತಾನೆ. ಅವನು ಯಶಸ್ವಿಯಾಗುತ್ತಾನೆಯೇ ?

## UNIT – III

Q. No. 3. (a) What is oppression and mismanagement ? What are the remedies available to prevent it under the Companies Act. Marks : 15

ದಬ್ಬಾಳಿಕೆ ಮತ್ತು ದುರಾಡಳಿತ ಎಂದರೇನು ? ಕಂಪನಿ ಕಾನೂನಿನಡಿಯಲ್ಲಿ ಅದನ್ನು ತಡೆಗಟ್ಟಲು ಇರುವ ಪರಿಹಾರಗಳು ಯಾವುವು ?

OR/**ಅಥವಾ**

Explain the procedure for appointment and removal of directors.

ಕಂಪನಿಯ ನಿರ್ದೇಶಕರನ್ನು ನೇಮಕ ಮಾಡುವ ಹಾಗೂ ಪದಚ್ಯುತಿಗೊಳಿಸುವ ಪ್ರಕ್ರಿಯೆಯನ್ನು ವಿವರಿಸಿ.

(b) Write a note on : Marks : 5

Special resolution.

ವಿಶೇಷ ಗೊತ್ತುವಳಿ.

OR/**ಅಥವಾ**

Corporate social responsibility.

ನಿಗಮದ ಸಾಮಾಜಿಕ ಹೊಣೆಗಾರಿಕೆ.

## UNIT – IV

Q. No. 4. (a) What is allotment ? And what are the statutory restrictions on allotment of shares ? Marks : 15

ವಿತರಿಸುವಿಕೆ ಎಂದರೇನು ? ಶೇರುಗಳನ್ನು ವಿತರಿಸುವಾಗ ಇರುವ ಶಾಸನಬದ್ಧ ನಿರ್ಬಂಧನೆಗಳು ಯಾವುವು ?

OR/**ಅಥವಾ**

Explain the characteristics of floating charge and fixed charge. When floating charge can be converted in to fixed charge ?

ಚಲಿಸುವ ಋಣಭಾರ ಹಾಗೂ ಸ್ಥಿರ ಋಣಭಾರದ ಗುಣಲಕ್ಷಣಗಳನ್ನು ವಿವರಿಸಿ. ಯಾವ ಸಂದರ್ಭದಲ್ಲಿ ಚಲಿಸುವ ಋಣಭಾರವನ್ನು ಸ್ಥಿರ ಋಣಭಾರವನ್ನಾಗಿ ಪರಿವರ್ತಿಸಬಹುದು ?

(b) Write a note on : Marks : 5

Transfer of shares.

ಶೇರುಗಳ ವರ್ಗಾವಣೆ.

OR/ಅಥವಾ

Dividends.

ಡಿವಿಡೆಂಡ್ಸ್.

## UNIT – V

Q. No. 5. (a) How voluntary winding up of a company is effected ? Explain the provisions relating to members voluntary winding up. Marks : 15

ಸ್ವ ಇಚ್ಛೆ ವಿಸರ್ಜನೆಯನ್ನು ಯಾವ ರೀತಿ ಕಾರ್ಯಗತಗೊಳಿಸಬಹುದು ? ಸದಸ್ಯರುಗಳ ಸ್ವ ಇಚ್ಛೆ ವಿಸರ್ಜನೆಗೆ ಸಂಬಂಧಿಸಿದಂತೆ ಇರುವ ನಿಯಮಗಳನ್ನು ವಿವರಿಸಿ.

OR/ಅಥವಾ

Explain the appointment, powers and functions of liquidator.

ಕಂಪನಿ ಪರಿಸಮಾಪಕನ ನೇಮಕಾತಿ, ಅಧಿಕಾರಗಳು ಹಾಗೂ ಕರ್ತವ್ಯಗಳನ್ನು ವಿವರಿಸಿ.

(b) Write a note on : Marks : 5

Take over and acquisition of minority interest.

ತೆಗೆದುಕೊಳ್ಳುವಿಕೆ ಹಾಗೂ ಅಲ್ಪಸಂಖ್ಯಾತ ಶೇರುಗಳ ಪಡೆಯುವಿಕೆ.

OR/ಅಥವಾ

Compulsory winding up of company.

ಕಡ್ಡಾಯವಾಗಿ ಕಂಪನಿಯನ್ನು ಮುಕ್ತಾಯಗೊಳಿಸುವುದು.

**0202/0621**

**II Semester 3 Years LL.B./VI Semester 5 Years B.A. LL.B. / B.B.A. LL.B.**
**Examination, June/July 2015**
**COMPANY LAW**

Duration : 3 Hours Max. Marks : 100

**Instructions** : 1. Answer Question No. **9** and **any 5 (five)** of the remaining questions.

2. Question No. **9** carries **20** marks and remaining questions carry **16** marks **each**.

3. Answer should be written either in **English** or **Kannada completely**.

**ಸೂಚನೆಗಳು** : 1. ಪ್ರಶ್ನೆ ಸಂಖ್ಯೆ **9** ಮತ್ತು ಇತರ ಯಾವುದೇ **5** ಪ್ರಶ್ನೆಗಳಿಗೆ ಉತ್ತರಿಸಿ.

2. ಪ್ರಶ್ನೆ **9** ಕ್ಕೆ **20** ಅಂಕಗಳು ಮತ್ತು ಇತರ **ಪ್ರತಿ** ಪ್ರಶ್ನೆಗೆ **16** ಅಂಕಗಳು.

3. ಉತ್ತರವನ್ನು **ಸಂಪೂರ್ಣವಾಗಿ ಕನ್ನಡದಲ್ಲಿ** ಅಥವಾ **ಇಂಗ್ಲೀಷ್**ನಲ್ಲಿ ಬರೆಯತಕ್ಕದ್ದು.

Q. No. 1. State the circumstances on which the court can lift the corporate veil of a company. Answer with the help of decided cases. Marks : 16

ಯಾವ ಸಂದರ್ಭದಲ್ಲಿ ನ್ಯಾಯಾಲಯವು ಸಂಸ್ಥೆ ಸ್ವರೂಪದ ಮುಸುಕನ್ನು ತೆರವುಗೊಳಿಸಬಹುದು ಎಂಬುದನ್ನು ನಿರ್ಧಾರಿತ ತೀರ್ಪುಗಳ ಸಹಾಯದೊಂದಿಗೆ ಉತ್ತರಿಸಿ.

Q. No. 2. What is Memorandum of Association ? State the procedure for alteration of objective clause of a company. Marks : 16

ಮನವಿ ಪತ್ರ ಎಂದರೇನು ? ಕಂಪನಿಯ ಉದ್ದೇಶ ವಿಭಾಗವನ್ನು ಬದಲಾಯಿಸಲು ನಿರ್ವಹಿಸಬೇಕಾದ ಪ್ರಕ್ರಿಯೆಗಳನ್ನು ತಿಳಿಸಿ.

Q. No. 3. Define Prospectus. Explain the effects of mis-statement in prospectus of a company. Marks : 16

ಪರಿಚಯ ಪತ್ರವನ್ನು ವ್ಯಾಖ್ಯಾನಿಸಿರಿ. ಪರಿಚಯ ಪತ್ರದಲ್ಲಿ ತಪ್ಪು ಹೇಳಿಕೆಯಿಂದ ಆಗುವ ಪರಿಣಾಮಗಳನ್ನು ವಿವರಿಸಿ.

**P.T.O.**

Q. No. 4. Who is a Promoter ? Explain the effects of pre-incorporation contracts. Marks : 16

ಪ್ರವರ್ತಕನೆಂದರೆ ಯಾರು ? ಸಂಯೋಜನ ಪೂರ್ವ ಕರಾರುಗಳ ಬದ್ಧತೆಯನ್ನು ವಿವರಿಸಿ.

Q. No. 5. What are the different classes of share capital ? Explain the statutory restrictions and general principles of allotment of shares. Marks : 16

ಷೇರು ಬಂಡವಾಳದ ವಿವಿಧ ಪ್ರಕ್ರಿಯೆಗಳು ಯಾವುವು ? ಷೇರು ಹಂಚಿಕೆಯ ಬಗ್ಗೆ ಇರುವ ಶಾಸನೀಯ ನಿರ್ಬಂಧನೆಗಳು ಮತ್ತು ಸಾಮಾನ್ಯ ತತ್ವಗಳನ್ನು ವಿವರಿಸಿ.

Q. No. 6. Discuss the provisions of Companies Act 2013 with regard to prevention of oppressions and mismanagement in a company. Marks : 16

ಕಂಪನಿಯಲ್ಲಿ ದಬ್ಬಾಳಿಕೆ ಮತ್ತು ದುರಾಡಳಿತವನ್ನು ತಡೆಗಟ್ಟಲು ಕಂಪನಿ ಅಧಿನಿಯಮ 2013 ರ ಉಪಬಂಧಗಳೊಂದಿಗೆ ಚರ್ಚಿಸಿರಿ.

Q. No. 7. Explain briefly the various methods of winding up of a company. Marks : 16

ಕಂಪನಿಯ ಸಮಾಪನೆ(ವಿಸರ್ಜನೆ)ಯ ಹಲವು ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

Q. No. 8. Write short notes on **any two** of the following : Marks : 2×8=16

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) One man company.

(b) Charges.

(c) Position of Director in a Company.

(a) ಏಕ ವ್ಯಕ್ತಿ ಕಂಪನಿ.

(b) ಋಣ ಭಾರ.

(c) ಕಂಪನಿಯಲ್ಲಿ ನಿರ್ದೇಶಕನ ಸ್ಥಾನ.

Q. No. 9. Solve **any two** of the following problems : Marks : 2×10 = 20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಯನ್ನು ಬಗೆಹರಿಸಿ :

(a) One of the object of the company 'Y' was to manufacture mechanical spares and to market them. The company 'Y' intended to manufacture gold ornaments and to sell them. Advise 'Y' company.

ಕೈಗಾರಿಕಾ ಬಿಡಿ ಭಾಗಗಳನ್ನು ತಯಾರಿಸಿ ಮತ್ತು ಮಾರುಕಟ್ಟೆ ಮಾಡುವ ಉದ್ದೇಶದಿಂದ 'Y' ಕಂಪನಿ ಸ್ಥಾಪನೆಯಾಗಿರುತ್ತದೆ. 'Y' ಕಂಪನಿಯು ಚಿನ್ನದ ಒಡವೆಗಳನ್ನು ತಯಾರಿಸಿ ಮತ್ತು ಮಾರಾಟ ಮಾಡುವುದಾಗಿ ಬಯಸುತ್ತದೆ. ಈ ಕಂಪನಿಗೆ ಸಲಹೆ ನೀಡಿ.

(b) 'X' company lends to 'Y' company a loan on a mortgage of its assets. The procedure laid down in the Articles for such transaction is not complied with. The directors of the 2 companies were the same. Is this mortgage binding upon a company ?

'X' ಕಂಪನಿಯು 'Y' ಕಂಪನಿಗೆ ಆಸ್ತಿಯ ಅಡಮಾನದ ಮೇಲೆ ಸಾಲ ಕೊಡುತ್ತದೆ. ಇದಕ್ಕೆ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಪಾಲಿಸಿರುವುದಿಲ್ಲ. ಎರಡು ಕಂಪನಿಗಳಿಗೆ ಇವರೇ ನಿರ್ದೇಶಕರಾಗಿರುತ್ತಾರೆ. ಅಡಮಾನವು ಕಂಪನಿಯ ಮೇಲೆ ಬಂಧನಕಾರವಾಗುತ್ತದೆಯೇ ?

(c) The Auditors of a company made a confidential report to the directors stating that the security for some loans are insufficient and difficulty of realization and stated that no dividends should be paid for the year, but the auditor also in his report to his shareholder stated that the value of the assets depends upon the realization. A dividend of 15% was declared out of capital assets. State whether the Auditor or Director are liable for the same.

ಒಂದು ಕಂಪನಿಯ ಲೆಕ್ಕ ಪರಿಶೋಧಕರು ನಿರ್ದೇಶಕನಿಗೆ ಒಂದು ಗೌಪ್ಯ ವರದಿ ಸಲ್ಲಿಸಿ ಭದ್ರತೆಗಾಗಿ ತೆಗೆದುಕೊಂಡ ಆಸ್ತಿಯ ಮೌಲ್ಯ ಸಾಕಷ್ಟು ಇಲ್ಲವೆಂದು ಮತ್ತು ಅದನ್ನು ಪಡೆಯುವಲ್ಲಿ ಆಗುವಂತಹ ತೊಂದರೆಗಳನ್ನು ತಿಳಿಸಿ ಮತ್ತು ಆ ವರ್ಷದ ಲಾಭಾಂಶವನ್ನು ಹಂಚಬಾರದೆಂದು ಹೇಳುತ್ತಾರೆ. ಆದರೆ ಲೆಕ್ಕ ಪರಿಶೋಧಕರು ಷೇರುದಾರರಿಗೆ ಕೊಟ್ಟ ವರದಿಯಲ್ಲಿ ಭದ್ರತೆಗಾಗಿ ತೆಗೆದುಕೊಂಡ ಆಸ್ತಿಯ ಹಣವನ್ನು ವಾಪಾಸು ಪಡೆಯುವುದರ ಮೇಲೆ ನಿರ್ಧಾರವಾಗಿದೆ ಎಂದು ಹೇಳುತ್ತಾರೆ. ಕಂಪನಿಯು ವರ್ಷಮೂಲ ಬಂಡವಾಳವನ್ನು ಉಪಯೋಗಿಸಿ 15% ಲಾಭಾಂಶವನ್ನು ಘೋಷಿಸುತ್ತದೆ. ಈ ರೀತಿಯ ನಡವಳಿಕೆಗೆ ಲೆಕ್ಕ ಪರಿಶೋಧಕರು ಅಥವಾ ನಿರ್ದೇಶಕರು ಜವಾಬ್ದಾರರಾಗುತ್ತಾರೆಯೇ ?

**0202/0621**

**II Semester 3 Year LL.B./VI Semester 5 Year B.A. LL.B./.B.B.A. LL.B.**
**Examination, June/July 2016**
**COMPANY LAW**

Duration : 3 Hours Max. Marks : 100

**Instructions**: 1. Answer Q. No. **9** and **any five** of the remaining questions.
2. Q. No. **9** carries **20** marks and the **remaining** questions carry **16** marks **each**.
3. Answers should be written **either** in **English** or in **Kannada completely**.

Q. No. 1. What are the advantages of incorporation of a Company ? Marks : 16
ಕಂಪನಿಯ ಸಂಸ್ಥಾಪನೆಯಿಂದಾಗುವ ಅನುಕೂಲತೆಗಳಾವುವು ?

Q. No. 2. Who is a Promoter ? What are his duties and liabilities ? Marks : 16
ಪ್ರವರ್ತಕನೆಂದರೆ ಯಾರು ? ಪ್ರವರ್ತಕನ ಕರ್ತವ್ಯ ಮತ್ತು ಹೊಣೆಗಾರಿಕೆಗಳಾವುವು ?

Q. No. 3. Define prospectus. State the contents of prospectus. Marks : 16
ಪರಿಚಯ ಪತ್ರಿಕೆಯನ್ನು ವ್ಯಾಖ್ಯಾನಿಸಿ. ಪರಿಚಯ ಪತ್ರಿಕೆಯ ಒಳಾಂಶಗಳನ್ನು ತಿಳಿಸಿರಿ.

Q. No. 4. Explain the position of directors in a company. Marks : 16
ಕಂಪನಿಯಲ್ಲಿ ನಿರ್ದೇಶಕನ ಸ್ಥಾನಮಾನಗಳನ್ನು ವಿವರಿಸಿ.

Q. No. 5. What are the general principles and statutory restrictions for allotment of shares ? Marks : 16
ಶೇರುಗಳ ಹಂಚುವಿಕೆಯ ಮೇಲಿರುವ ಸಾಮಾನ್ಯ ತತ್ವಗಳು ಮತ್ತು ಶಾಸನೀಯ ನಿರ್ಬಂಧಗಳಾವುವು ?

Q. No. 6. State the different kinds of meetings in a company. What is the procedure to call a meeting of the company ? Marks : 16
ಕಂಪನಿಯಲ್ಲಿ ನಡೆಯುವ ವಿವಿಧ ರೀತಿಯ ಸಭೆಗಳನ್ನು ತಿಳಿಸಿರಿ. ಕಂಪನಿಯ ಸಭೆಯನ್ನು ಕರೆಯುವ ಪ್ರಕ್ರಿಯೆ ಏನು ?

Q. No. 7. State the circumstances under which the tribunal can order for winding up of the company. Marks : 16
ಟ್ರಿಬ್ಯುನಲ್ ಕಂಪನಿಯನ್ನು ಕಡ್ಡಾಯವಾಗಿ ಸಮಾಪನೆಗೊಳಿಸಬಹುದಾದ ಸಂದರ್ಭಗಳನ್ನು ತಿಳಿಸಿರಿ.

Q. No. 8. Write short notes on **any two** : Marks : 2×8=16

ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Pre-Incorporation Contracts.
ಸಂಸ್ಥಾಪನಾ ಪೂರ್ವ ಕರಾರುಗಳು.

(b) Call on Shares.
ಶೇರುಗಳ ಮೇಲೆ ಕರೆ.

(c) Dividend.
ಲಾಭಾಂಶ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ **ಎರಡನ್ನು** ಪರಿಷ್ಕರಿಸಿರಿ :

(a) A company inserted an advertisement in a newspaper stating that some shares were still available for sale according to the terms of the porspectus of the company which could be obtained on application. Can it be considered as prospectus ?

ಒಂದು ಕಂಪನಿಯು ತನ್ನಲ್ಲಿ ಇನ್ನೂ ಕೆಲವು ಶೇರುಗಳು ಮಾರಾಟಕ್ಕೆ ಉಳಿದಿವೆ ಎಂದು ಮತ್ತು ಅವುಗಳು ಕಂಪನಿಯಲ್ಲಿ ಅರ್ಜಿಯ ಮುಖಾಂತರ ಪಡೆದುಕೊಳ್ಳಬಹುದಾದ ಪರಿಚಯ ಪತ್ರಿಕೆಯಲ್ಲಿನ ಶರತ್ತುಗಳಿಗೆ ಒಳಪಟ್ಟಿವೆಯೆಂದೂ, ಒಂದು ದಿನಪತ್ರಿಕೆಯ ಜಾಹೀರಾತಿನಲ್ಲಿ ನೀಡಿತು. ಈ ಜಾಹೀರಾತನ್ನು ಪರಿಚಯ ಪತ್ರವೆಂದು ಪರಿಗಣಿಸಬಹುದೇ ?

(b) A film company borrowed a sum of money on the security of all its assets including machinery etc. now lying and that may be brought by it until the repayment of loan. What kind of charge is created by the company ?

ಒಂದು ಫಿಲ್ಮ್ ಕಂಪನಿಯು ತನ್ನಲ್ಲಿ ಪ್ರಸ್ತುತವಿರುವ ಯಂತ್ರೋಪಕರಣಗಳನ್ನೊಳಗೊಂಡ ಸ್ವತ್ತುಗಳು ಮತ್ತು ತಾನು ಮಾಡಿದ ಸಾಲ ಮರುಪಾವತಿ ಮಾಡುವ ತನಕ ಕೂಡಿಸುವ ಎಲ್ಲಾ ಆಸ್ತಿಗಳನ್ನು ಒತ್ತೆ ಇಟ್ಟು ಸಾಲ ಪಡೆಯುತ್ತದೆ. ಕಂಪನಿ ಸೃಷ್ಟಿಸಿದ ಪ್ರಭಾರ ಯಾವುದು ?

(c) 'N' a minor was registered as a shareholder. After attaining majority, he continues to receive dividend from the company. Subsequently company went into liquidation. 'N' denies liability as a shareholder. Decide.

'N'ಎಂಬ ಅಪ್ರಾಪ್ತನು ಒಂದು ಕಂಪನಿಯ ಶೇರುದಾರನಾಗಿ ನೋಂದಾಯಿಸಲ್ಪಟ್ಟನು. ಅವನು ಪ್ರಾಪ್ತವಯಸ್ಕನಾದ ಬಳಿಕ ಕಂಪನಿಯಿಂದ ನಿರಂತರ ಲಾಭಾಂಶವನ್ನು ಸ್ವೀಕರಿಸುತ್ತಾ ಬಂದಿರುತ್ತಾನೆ. ನಂತರ ಕಂಪನಿಯು ದಿವಾಳಿ ಹೊಂದುತ್ತದೆ. ಇಂಥ ಸಂದರ್ಭದಲ್ಲಿ 'N'ನು ತನ್ನ ಹೊಣೆಗಾರಿಕೆಯನ್ನು ಅಲ್ಲಗಳೆಯುತ್ತಾನೆ. ತೀರ್ಮಾನಿಸಿ.

0202/0621

**II Semester 3 Years LL.B./VI Semester 5 Years B.A. LL.B./B.B.A. LL.B.**
**Examination, June/July 2017**
**COMPANY LAW (Old Batch)**

Duration : 3 Hours                                        Max. Marks : 100

**Instructions** : 1. Answer Question No. **9** and **any five** of the **remaining**.

2. Question No. **9** carries **20** marks and **remaining** questions carry **16** marks **each**.

3. Answer should be written **either** in English or Kannada **completely**.

Q. No. 1. What are the disadvantages of incorporation of a company. Explain. Marks : 16

ಕಂಪನಿಯನ್ನು ನಿಗಮಗೊಳಿಸುವುದರಿಂದ ಆಗುವ ಅನಾನುಕೂಲತೆಗಳಾವುವು ? ವಿವರಿಸಿ.

Q. No. 2. Define a "Private Company". How does it differ from "Public Company" ? Explain. Marks : 16

'ಖಾಸಗಿ ಕಂಪನಿ'ಯನ್ನು ಪರಿಭಾಷಿಸಿ. 'ಸಾರ್ವಜನಿಕ ಕಂಪನಿ'ಯಿಂದ ಅದು ಹೇಗೆ ಭಿನ್ನವಾಗಿದೆ ? ವಿವರಿಸಿ.

Q. No. 3. Critically examine the doctrine of Ultravires. Marks : 16

''ಅಧಿಕಾರಾತೀತ ಸಿದ್ಧಾಂತ''ವನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಿರಿ.

Q. No. 4. Define prospectus and mention briefly the important contents of a prospectus. Marks : 16

ವಿವರಣಾ ಪತ್ರವನ್ನು ವ್ಯಾಖ್ಯಾನಿಸಿ ಮತ್ತು ವಿವರಣಾ ಪತ್ರದಲ್ಲಿರಬೇಕಾದ ಮುಖ್ಯ ಅಂಶಗಳನ್ನು ಸಂಕ್ಷಿಪ್ತವಾಗಿ ಹೇಳಿರಿ.

Q. No. 5. Write a detailed note on the powers given by the Companies Act to the Board of Directors and restrictions placed on such powers. Marks : 16

ಕಂಪನಿ ಕಾನೂನಿನ ಅಡಿಯಲ್ಲಿ ನಿರ್ದೇಶಕ ಮಂಡಳಿಗೆ ಕೊಟ್ಟ ಅಧಿಕಾರಗಳು ಮತ್ತು ಆ ಅಧಿಕಾರಗಳ ಮೇಲೆ ಇರುವ ನಿರ್ಬಂಧಗಳ ಬಗ್ಗೆ ವಿಸ್ತೃತ ಟಿಪ್ಪಣಿ ಬರೆಯಿರಿ.

Q. No. 6. What are the different kinds of debentures that can be issued under the Companies Act, 2013 ? Explain. Marks : 16

ಕಂಪನಿ ಅಧಿನಿಯಮ 2013ರ ಪ್ರಕಾರ ಬಿಡುಗಡೆ ಮಾಡಬಹುದಾದ ವಿವಿಧ ಸಾಲಪತ್ರಗಳಾವುವು ? ವಿವರಿಸಿ.

Q. No. 7. Describe the powers of the Central Government to provide for the amalgamation of the companies in public interest. Marks : 16

ಕಂಪನಿಗಳನ್ನು ಸಾರ್ವಜನಿಕ ಹಿತಾಸಕ್ತಿಗೋಸ್ಕರ ಸಮ್ಮಿಲನಗೊಳಿಸಲು ಕೇಂದ್ರ ಸರ್ಕಾರಕ್ಕೆ ಇರುವ ಅಧಿಕಾರಗಳನ್ನು ನಿರೂಪಿಸಿ.

Q. No. 8. Write short notes on **any two** of the following : Marks : 2×8=16

ಯಾವುದಾದರೂ **ಎರಡರ** ಬಗ್ಗೆ ಲಘು ಟಿಪ್ಪಣಿ ಬರೆಯಿರಿ :

a) Lien on shares.
ಷೇರುಗಳ ಮೇಲಿನ ಧಾರಣಾಧಿಕಾರ.

b) Dividend.
ಲಾಭಾಂಶ.

c) Duties of official liquidator.
ಅಧಿಕೃತ ಸಮಾಪಕನ ಕರ್ತವ್ಯಗಳು.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಗೆಹರಿಸಿ :

a) A profitable business was offered to a company. But a Director got a resolution passed that the company was not interested in that business. The same offer was later on obtained by the Directors in their individual names and they earned profit. A shareholder asks the profit received by the directors to be credited to the company. Decide.

ಒಂದು ಕಂಪನಿಗೆ ಲಾಭವಾಗುವ ವ್ಯವಹಾರ ಪ್ರಸ್ತಾಪವಾಗುತ್ತದೆ. ಆದರೆ ಒಬ್ಬ ನಿರ್ದೇಶಕನು ತಮ್ಮ ಕಂಪನಿಗೆ ಇದರಲ್ಲಿ ಆಸಕ್ತಿ ಇಲ್ಲ ಎಂದು ಗೊತ್ತುವಳಿ ಪಾಸ್ ಮಾಡಿಸುತ್ತಾನೆ. ಅದೇ ಪ್ರಸ್ತಾಪವನ್ನು ನಿರ್ದೇಶಕರು ತಮ್ಮ ವೈಯಕ್ತಿಕ ಹೆಸರಿಗೆ ತೆಗೆದುಕೊಂಡಿರುತ್ತಾರೆ ಮತ್ತು ಲಾಭ ಗಳಿಸುತ್ತಾರೆ. ಒಬ್ಬ ಷೇರುದಾರನು ಲಾಭವು ಕಂಪನಿಗೆ ಸಲ್ಲಬೇಕೆಂದು ವಾದಿಸುತ್ತಾನೆ. ನಿರ್ಣಯಿಸಿ.

b) 'X' applied for shares in 'Y' company. His application was sent by post and a letter of allotment was despatched by the company soon after through post. But the letter never reached 'X'. Is he liable as a shareholder ? Decide.

'Y' ಕಂಪನಿಯ ಶೇರುಗಳಿಗಾಗಿ 'X' ಅರ್ಜಿ ಹಾಕುತ್ತಾನೆ. ಅರ್ಜಿಯನ್ನು ಅಂಚೆಯ ಮೂಲಕ ಕಳುಹಿಸಲಾಗಿತ್ತು. ಶೇರು ವಿತರಣಾ ಪತ್ರವನ್ನು ಶೀಘ್ರವಾಗಿ ಅಂಚೆಯ ಮೂಲಕ ಕಳುಹಿಸಲಾಯಿತು. ಆದರೆ ಪತ್ರವು 'X' ನಿಗೆ ತಲುಪಲೇ ಇಲ್ಲ. ಅವನು ಶೇರುದಾರನಾಗಿ ಹೊಣೆಗಾರನಾಗುತ್ತಾನೆಯೇ ? ತೀರ್ಮಾನಿಸಿ.

c) A company has suspended its business for more than one year due to labour strike. Can a petition for winding up of the company be entertainable ?

ಕಾರ್ಮಿಕರ ಮುಷ್ಕರದಿಂದ ಒಂದು ಕಂಪನಿಯು ತನ್ನ ವ್ಯಾಪಾರವನ್ನು ಒಂದು ವರ್ಷಕ್ಕಿಂತ ಹೆಚ್ಚು ಕಾಲ ಅಮಾನತುಗೊಳಿಸುತ್ತದೆ. ಈ ಕಾರಣಕ್ಕಾಗಿ ಕಂಪನಿಯನ್ನು ವಿಸರ್ಜಿಸಬೇಕು ಎಂದು ಹೂಡಿದ ದಾವೆಯ ಅರ್ಜಿಯು ಯೋಗ್ಯವಾಗಬಹುದೇ ?